# ‘ಹಾಕಿ’ಯ ವಾಲ್ಮೀಕಿ




ಧನರಾಜ್ ಪಿಳ್ಳೈ ಜತೆಗೆ

ಬಡತನದ ಬೇಗುದಿಯಲ್ಲಿ ಬೆಂದ ಈ ಹುಡುಗ ಈಗ ಭಾರತದ ಕ್ರೀಡೆಯಲ್ಲಿ ರಾರಾಜಿಸುತ್ತಿದ್ದಾನೆ. ಈತನನ್ನು ‘ಭಾರತದ ಹಾಕಿ ಭವಿಷ್ಯ’ ಎಂದೇ ಹೊಗಳಲಾಗುತ್ತಿದೆ.

■ ಕೆ.ಓಂಕಾರ ಮೂರ್ತಿ



ಇವರ ಪಾಲಿಗೆ ಆ ಗ್ಯಾರೇಜ್ ತಾತ್ಕಾಲಿಕ ಮನೆ!

ಅದಕ್ಕೆ ಸರಿಯಾದ ಚಾವಡಿ ಇಲ್ಲ. ಮಳೆ ಬಂದಾಗ ಒಳಗೆ ಮಲಗುವುದೇ ಕಷ್ಟ. ಅದಕ್ಕೆ ವಿದ್ಯುತ್ ಸಂಪರ್ಕವಿಲ್ಲ. ಆರು ಮಂದಿಯ ಈ ಕುಟುಂಬ ಒಟ್ಟಿಗೆ ಮಲಗಲು ಆ ಮನೆಯಲ್ಲಿ ಜಾಗವಿಲ್ಲ. ಕೂರಲು ಒಂದು ಕುರ್ಚಿ ಇಲ್ಲ. ತಂದೆ ಕಾರಿನ ಚಾಲಕ. ಕಿತ್ತು ತಿನ್ನುವ ಬಡತನದ ಮಧ್ಯೆ ಆತನ ಬದುಕು ಸಾಗುತ್ತಿತ್ತು.

21 ವರ್ಷಗಳಿಂದ ಇಂತಹ ಸಮಸ್ಯೆ ನಡುವೆಯೇ ಬೆಳೆದಾತ ಯುವರಾಜ್ ವಾಲ್ಮೀಕಿ. ಎಂದೂ ಮಲಗದ ನಗರಿ, ಮುಂಬೈನ ಮೆರಿನ್ ಲೈನ್ಸ್‌ನ ಫ್ಲೈಓವರ್ ಕೆಳಗಿರುವ ಗುಡಿಸಿಲಿನಂತಹ ಆ ಮನೆಯಲ್ಲಿ ಬೆಳೆದ ವಾಲ್ಮೀಕಿ ಈಗ ಭಾರತದ ಸ್ಟಾರ್ ಹಾಕಿ ಆಟಗಾರ.

ಸರಿಯಾಗಿ ಜಾಗವಿಲ್ಲದ ಕಾರಣ ಆತ ಗೆದ್ದ ಪ್ರಶಸ್ತಿಗಳನ್ನು ಮನೆಯ ಮೂಲೆಯ ನೆಲದಲ್ಲಿ ಇಡಲಾಗಿದೆ. ಆದರೆ ತಮ್ಮ ಕನಸು ನನಸಾಗಿಸಿಕೊಳ್ಳುವ ಉತ್ಸಾಹವನ್ನು ತಗ್ಗಿಸಲಿಲ್ಲ ಆ ಕಿತ್ತು ತಿನ್ನುವ ಬಡತನ. ಚೀನಾದ ಓರ್ಡೋಸ್‌ನಲ್ಲಿ ಇತ್ತೀಚೆಗೆ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಲು 21ರ ಹರೆಯದ ಈ ಹುಡುಗ ಕೂಡಾ ಕಾರಣ.

ಪಾಕಿಸ್ತಾನ ವಿರುದ್ಧದ ಫೈನಲ್‌ನಲ್ಲಿ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ವಾಲ್ಮೀಕಿ ಒಂದು ಗೋಲು ಗಳಿಸಿದರು. ಅವರು ಈ ಟೂರ್ನಿಯಲ್ಲಿ ಒಟ್ಟು ಮೂರು ಗೋಲು ದಾಖಲಿಸಿದರು. ಇದು ಅವರ ಚೊಚ್ಚಲ ಟೂರ್ನಿ. ಆ ಗೆಲುವು ಈಗ ಈ ಸ್ಲಮ್ ಹುಡುಗನ ಜೀವನವನ್ನೇ ಬದಲಾಯಿಸಿದೆ. ‘ಭಾರತದ ಹಾಕಿಯ ಭವಿಷ್ಯ ಈ ಯುವರಾಜ’ ಎಂದು ಪರಿಣತರು ಕರೆಯುತ್ತಿದ್ದಾರೆ.

ಒಂದು ಗೆಲುವು ಏನೆಲ್ಲವನ್ನೂ ತಂದುಕೊಡುತ್ತದೆ. ಆತನ ಬಡತನದ ವಿಷಯ ಇನ್ನು ಇತಿಹಾಸವಷ್ಟೆ. ಕಾರಣ ವಾಲ್ಮೀಕಿ ಈಗ ಲಕ್ಷಾಧಿಪತಿ. ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಅವರಿಗೆ ಈಗ ಲಕ್ಷ ಲಕ್ಷ ರೂಪಾಯಿಗಳು ಬಹುಮಾನದ ರೂಪದಲ್ಲಿ ಸಿಗುತ್ತಿವೆ. ಅವರ ನಿವಾಸಕ್ಕೆ ತಕ್ಷಣ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ನೌಕರಿ ಕೊಡುವುದಾಗಿ ಮಹಾರಾಷ್ಟ್ರ ಸರ್ಕಾರ ಭರವಸೆ ನೀಡಿದೆ. ನಿವೇಶನ ಕೂಡ ಲಭ್ಯವಾಗುವ ನಿರೀಕ್ಷೆ ಇದೆ.

ಹೌದು, ರಾತ್ರಿ ಕಳೆದು ಬೆಳಕು ಹರಿಯಲೇಬೇಕು. ಅದು ಜಗದ ನಿಯಮ. ಹಾಗೇ, ಯುವರಾಜನ ಬಾಳಲ್ಲೂ ಬೆಳಕು ಮೂಡಿದೆ.

‘ನಮ್ಮ ಬಾಳು ಇಷ್ಟು ದಿನ ಕತ್ತಲೆಯಲ್ಲಿಯೇ ಸಾಗುತ್ತಿತ್ತು. ಈಗ ಬೆಳಕು ಮೂಡಿದೆ. ಮತ್ತಷ್ಟು ಸಾಧಿಸಲು ಅದು ಸ್ಫೂರ್ತಿ ಆಗಲಿದೆ’ ಎಂದು ವಾಲ್ಮೀಕಿ ನುಡಿದಿದ್ದಾರೆ.

ಭಾರತ ಕ್ರಿಕೆಟ್ ತಂಡದ ಆಟಗಾರರು ಒಂದು ಏಕದಿನ ಪಂದ್ಯ ಆಡಿದರೆ ಸಾಕು. ಒಬ್ಬೊಬ್ಬರಿಗೆ ತಲಾ ನಾಲ್ಕು ಲಕ್ಷ ರೂಪಾಯಿ ಸಿಗುತ್ತೆ. ಮೂರೂವರೆ ಗಂಟೆಯ ಒಂದು ಟ್ವೆಂಟಿ–20 ಪಂದ್ಯ ಆಡಿದರೆ ಎರಡು ಲಕ್ಷ ಜೇಬು ಸೇರುತ್ತೆ. ಆದರೆ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಚಾಂಪಿಯನ್ ಆದ ಭಾರತ ತಂಡದ ಹಾಕಿ ಆಟಗಾರರಿಗೆ ಸಂಘಟಕರು ಹಣವನ್ನೇ ನೀಡಿಲ್ಲ!

ಚಾಂಪಿಯನ್ ಆಗಿ ಬಂದ ಆಟಗಾರರಿಗೆ ‘ಹಾಕಿ ಇಂಡಿಯಾ’ ಪ್ರಕಟಿಸಿದ್ದು ತಲಾ 25 ಸಾವಿರ ರೂಪಾಯಿ. ಒಂದು ಹಾಕಿ ಕಿಟ್ ತೆಗೆದುಕೊಳ್ಳಲು ಅದು ಸಾಕಾಗುವುದಿಲ್ಲ. ಹಾಗಾಗಿ ಆಟಗಾರರು ಅದನ್ನು ತಿರಸ್ಕರಿಸಿದರು. ಅದು ಸುದ್ದಿಯಾದ ಬಳಿಕ ವಷ್ಟೇ ಕೇಂದ್ರ ಸರ್ಕಾರ ಕಣ್ಣು ಬಿಟ್ಟಿತು. ನಂತರ ರಾಜ್ಯ ಸರ್ಕಾರಗಳೂ ತಮ್ಮ ಆಟಗಾರರಿಗೆ ಬಹುಮಾನ ಪ್ರಕಟಿಸಿದವು. ‘ಖಾಸಗಿ ಕಂಪೆನಿಯೊಂದು ಕ್ರಿಕೆಟ್ ಹಾಗೂ ಹಾಕಿ ಎರಡನ್ನೂ ಪ್ರಾಯೋಜಿಸುತ್ತಿದೆ. ಅವರು ಕ್ರಿಕೆಟಿಗರಿಗೆ ಮನೆ ನೀಡಿದ್ದಾರೆ. ಆದರೆ ಹಾಕಿ ಆಟಗಾರರಿಗೆ ಒಂದು ಬೆಂಕಿ ಪೊಟ್ಟಣವನ್ನೂ ನೀಡಿಲ್ಲ’ ಎಂದು ಮಾಜಿ ಕೋಚ್ ಜೋಕಿಮ್ ಹಿಂದೊಮ್ಮೆ ಕಣ್ಣೀರಿಟ್ಟಿದ್ದರು.

ಇದು ಭಾರತದ ರಾಷ್ಟ್ರೀಯ ಕ್ರೀಡೆ ಹಾಕಿಯ ಪರಿಸ್ಥಿತಿ. ಇಂತಹ ಕಷ್ಟದ ನಡುವೆಯೂ ಯುವರಾಜ್ ಅವರಂತಹ ಆಟಗಾರರು ಹಾಕಿ ಆಟದತ್ತ ಒಲವು ತೋರುತ್ತಿದ್ದಾರೆ. ತಂಡದ ಗೆಲುವಿಗೆ ಕಾರಣರಾಗಿ ಹಾಕಿ ಕ್ರೀಡೆಗೆ ಮತ್ತೆ ಜೀವ ತುಂಬುತ್ತಿದ್ದಾರೆ.